Govt. of Karnataka [C.R.P. 67

Deposition Sheets (R.P. No. 57)

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ**

**ಪ್ರಕರಣ ಸಂಖ್ಯೆಃ 3871/2022**

| ದಿನಾಂಕಃ 13.08.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
|---|---|---|---|
| ಸಿಡಬ್ಲ್ಯೂ ಃ | 7 | ಪಿಡಬ್ಲ್ಯೂ ಃ | 7 |
| ಹೆಸರು | ಜಗನಾಥ | | |
| ತಂದೆ / ಗಂಡನ ಹೆಸರು | ಉಗ್ರಯ್ಯ | | |
| ವಯಸ್ಸು | 28ವರ್ಷ | | |
| ಉದ್ಯೋಗ | ಖಾಸಗಿ ಉದ್ಯೋಗಿ | | |
| ವಾಸ | ಕೆಂಪನಹಳ್ಳಿ ಗ್ರಾಮ. | | |

**ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ**

ಆರೋಪಿ ನನಗೆ ಗೊತ್ತಿಲ್ಲ. ದಿಃ06.02.2022ರಂದು ಸಂಜೆ 5.20ರ ಸಮಯದಲ್ಲಿ ದೊಡ್ಡ ಆಲದ ಮರ ಗ್ರಾಮದ ಸಮೀಪ ಪಲ್ಲವಿ ಡಾಬಾದ ಹಿಂಭಾಗ ನನ್ನ ಸ್ನೇಹಿತ ಪ್ರಕಾಶ್ ಮೋಟಾರ್ ವಾಹನದಲ್ಲಿ ಕುಳಿತಿದ್ದಾಗ ಒಬ್ಬ ವ್ಯಕ್ತಿಯು ಕೆಎ06ಎನ್4243 ಕಾರನ್ನ ಅತಿವೇಗ ಮತ್ತು ಅಜಾಗರಾಕತೆಯಿಂದ ಚಾಲನೆ ಮಾಡಿ ಅಪಘಾತ ಪಡಿಸಿರುತ್ತಾರೆ. ನಂತರ ನಾನು ಪ್ರಕಾಶ್‌ರವರನ್ನು ಹೇಮಾವತಿ ಆಸ್ಪತ್ರೆಗೆ ದಾಖಲು ಮಾಡಿಸಿರುತ್ತೇನೆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ರಾಮಯ್ಯ ಆಸ್ಪತ್ರೆಗೆ ದಾಖಲಿಸಿದ್ದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ. ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಅಪಘಾತವಾದ ವಾಹನಗಳ ಫೋಟೋಗಳನ್ನು ತೋರಿಸಲಾಗಿ ಅವುಗಳನ್ನು ನಿಪಿ-9 ರಿಂದ 12 ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಎಪಿಪಿ ರವರಿಂದಃ**

ನ್ಯಾಯಲಯದ ಮುಂದಿರುವ ಆರೋಪಿ ಘಟನಾ ದಿನ ನಾನು ಮೇಲೆ ತಿಳಿಸಿದ ಕಾರಿನ ಚಾಲಕರು ಆಗಿದ್ದರು ಎಂದರೆ ಸರಿ. ಆರೋಪಿಯು ಕಾರನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ ಪ್ರಕಾಶ್ ರವರ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದ ಪರಿಣಾಮ ಅಪಘಾತ ವಾಗಿದೆ ಎಂದರೆ ಸರಿ. ಅಪಘಾತದಿಂದ ಉಂಟಾದ ಗಾಯಗಳಿಂದ ಪ್ರಕಾಶ್ ರವರು ಮೃತ ಪಟ್ಟಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಶಿರಾ.